ಕಥೆ

# ಒಂದೇ ಒಂದು ಸುಳ್ಳು

'ಬಾಳಿಗೊಂದೇ ಗೊನೆ. ಬಾಳಿಗೊಂದೇ ಮದುವೆ ಅಲ್ವಾ? ಅಮ್ಮಾ? ವರ ತನ್ನ ಮದುವೆಗಾಗಿ ಒಳ್ಳೇ ವ್ಯಕ್ತಿತ್ವಕ್ಕಾಗಿ ಒಂದೇ ಒಂದು ಸುಳ್ಳು ಹೇಳಿದ್ದಾನೆ. ಯಾರಿಗೂ ತೊಂದರೆ ಆಗದ ಹಾಗೆ. ತನ್ನ ಬಗ್ಗೆ ಮೆಚ್ಚುಗೆ ಮೂಡಲಿ ಅಂತ ಇರ್ಲಿ'

■ **ಸುಶೀಲಾ ಆರ್. ರಾವ್**

ಬಾನಿನ ನಿಶೆಯನ್ನು ಸೀಳಿ ಫಳ್ಳೆಂದು ಕೋರೈಸುವ ಮಿಂಚನ್ನು ತುಂಡರಿಸಿ ಸಾಲಾಗಿ ಕೋಲುಗಳಿಗೆ ಜೋಡಿಸಿಟ್ಟಂತೆ ಬೆಳಕು ಬೀರುತ್ತಿದ್ದವು ಮುಂಜಾನೆಯ ಬೀದಿದೀಪಗಳು. ಬೀಸುವ ಮೆಲುಗಾಳಿ, ಭರ್‍ರನೆ ಸಾಗುವ ಕೆಲವೊಂದು ವಾಹನಗಳು, ಅಲ್ಲಲ್ಲಿ ನಡೆದಾಡುತ್ತಿರುವ ಒಬ್ಬಿಬ್ಬರು, ಉಳಿದಂತೆ ನಿರ್ಜನ ರಸ್ತೆ. ಅತ್ತ ದೊಡ್ಡ ನಗರವೂ ಅಲ್ಲ, ಇತ್ತ ಚಿಕ್ಕಹಳ್ಳಿಯೂ ಅಲ್ಲದ ಮಧ್ಯಮ ಸ್ಥಿತಿಗತಿಯಲ್ಲಿತ್ತು ಆ ಒಂದೂರು. ಆಗಿನ್ನೂ ಬೆಳಗ್ಗಿನ ಐದೂವರೆಯ ಸಮಯ.

ಆಗಲೇ ತಮ್ಮ ವಾಕಿಂಗ್ ಮುಗಿಸಿ ಮನೆಯತ್ತ ಮರಳುತ್ತಿದ್ದರು ಆ ಜೋಡಿ ತಂದೆ ಮಗಂದಿರು, ಜನಾರ್ದನ ಮತ್ತು ನಾಗೇಶ್. ಎಪ್ಪತ್ತರ ಹರೆಯದ ಜನಾರ್ದನರದು ಬೀಸುನಡಿಗೆ, ರಸ್ತೆಗುಂಟ ಸರಸರ ಸಾಗುತ್ತಿದ್ದರೆ ಅವರ ಚಪ್ಪಲಿ ಸದ್ದು ಪರ್ ಪರ್ ಎಂದು ಅಷ್ಟು ದೂರಕ್ಕೇ ಕೇಳಿಸುತ್ತಿತ್ತು. ದೂರದಿಂದ ನೋಡಿದರಂತೂ ಉದ್ದನೆಯ ಕೋಲೊಂದು ಚಲಿಸುತ್ತಿರುವಂತೆ ಕಾಣಿಸುತ್ತಿತ್ತು. ಮಗನಿಗಿನ್ನೂ ನಲ್ವತ್ತರ ಹರೆಯ, ಗಿಡ್ಡ ದೇಹದಾತ, ಅವರ ಸನಿಹ ನಡೆದಾಡುತ್ತಿದ್ದರೆ ಅವರ ಕೈ ಕೋಲಿನಂತೆ ಕಾಣುತ್ತಿದ್ದ. ಇತ್ತೀಚೆಗೆ ಸ್ಥೂಲಕಾಯನಾಗುತ್ತಿದ್ದ ನಾಗೇಶನ ಹೊಟ್ಟೆಗೂ ಮುಂದೆ ಬರುವ ಆವೇಗ, ಆವೇಶ. ಅದಕ್ಕಾಗಿ ತಂದೆಯೊಂದಿಗೆ ತಾನೂ ವಾಯುವಿಹಾರದಲ್ಲಿ ಪಾಲುಗೊಳ್ಳುತ್ತಿದ್ದ.

ನಾಗೇಶನ ವಯಸ್ಸು ಯೌವನದಂಚಿಗೆ ಬಂದಿದ್ದರೂ ವರನೆಂಬ ಪಟ್ಟ ಇನ್ನೂ ಅಲಭ್ಯವಾಗಿತ್ತು. ಆಪ್ತಗೆಳೆಯರೆಲ್ಲ ತಂತಮ್ಮ ಸಂಸಾರದ ಪರಿಧಿಯೊಳಗೆ ಗಿರಕಿ ಹೊಡೆಯುತ್ತಿದ್ದರೆ ಇವನೊಬ್ಬ ಹೊರಗಿದ್ದ. ಇವನು ಆರಾಮ ಎಂದು ಅವರೆಲ್ಲ ಭಾವಿಸುತ್ತಿದ್ದರೆ ಅವರೆಲ್ಲ ಸಾರ್ಥಕಜೀವಿಗಳು ಎಂದು ಈತ ಭ್ರಮಾಧೀನ ಕೀಳರಿಮೆಯಲ್ಲಿ ಬೇಯುತ್ತಿದ್ದ ತಂದೆ ಜನಾರ್ದನ, ತಾಯಿ ರೇವತಿಯರಿಗೂ ಅದೊಂದು ನಿತ್ಯ ಕೊರಗಿನ ಸಂಗತಿಯೇ.

ತಂದೆ ಮಗಂದಿರದು ಸ್ವಭಾವ ಹಾಗೂ ಹೆಚ್ಚಿನ ವಿಷಯಗಳಲ್ಲಿ ತದ್ವಿರುದ್ಧವೇ. ನಾಗೇಶನಿಗೆ ಸಣ್ಣ ಉದ್ಯೋಗ, ಸಂಬಳವೂ ಸಾಧಾರಣ ಮೊತ್ತವೇ. ಜನಾರ್ದನರು ಸರಕಾರಿ ನೌಕರರಾಗಿದ್ದು ಇದೀಗ ಸಾಕಷ್ಟು ಮಾಸಿಕ ಹಣಕ್ಕೆ ಸೇರುವ ಪಿಂಚಣಿದಾರರು. ಮಗ ಮಿತಭಾಷಿಯಾದರೆ ಜನಾರ್ದನರು ಧಾರಾಳ ಮಾತಿನ ಕೆಲವೊಮ್ಮೆ ಉಡಾಫೆ ಅಥವಾ ಒರಟು ಅನ್ನಬಹುದಾದ ಮಾತಿನ ಮೋಡಿಗಾರ. ವಾಕಿಂಗ್ ನಲ್ಲಿ ಈ ನೇರ ಖಾರ ಮಾತಿನ ಸರದಾರರು ಬಾಯಿ ಬಿಟ್ಟರೆಂದರೆ ಅವರ ದುಂದುಭಿ ಧ್ವನಿ ದೂರದವರೆಗೂ ವ್ಯಾಪಿಸಿ ಬಿಡುತ್ತಿತ್ತು.

